ಇ) *ಈ ಸಮಿತಿಯು ವಿದ್ಯುತ್ ಕ್ಷೇತ್ರದ ಯಾವ ಯಾವ ವಿಭಾಗದ ಬಗ್ಗೆ ಅಧ್ಯಯನವನ್ನು ನಡೆಸಲಿದೆ? ಹಾಗೂ ಇದಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗಿದೆ?*

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಸರ್ಕಾರವು ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆ ತರಲು ಹೈದರಾಬಾದಿನಲ್ಲಿರುವ ಭಾರತದ ಆಡಳಿತ ಸಿಬ್ಬಂದಿಯ ಮಹಾ ವಿದ್ಯಾಲಯವನ್ನು ಸ್ಪರ್ಧಾತ್ಮಕ ಸವಾಲಿನ ನಂತರ ಈ ಬಗ್ಗೆ ಅಧ್ಯಯನ ಮಾಡಲು ನೇಮಿಸಿತು. ಇದರ ವರದಿಯನ್ನು 1997ರ ಡಿಸೆಂಬರ್ ಕಡೆಯ ತನಕ ನಿರೀಕ್ಷಿಸಲಾಗಿದೆ. ಈ ಅಧ್ಯಯನದ ಬಗ್ಗೆ ಮೇಲ್ವಿಚಾರಣೆ ಮಾಡಲು ಸರ್ಕಾರವು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿದ್ದು, ಈ ಸಮಿತಿಯ ಮೊದಲ ಸಭೆಯು ದಿನಾಂಕ 15-7-1997 ರಂದು ನಡೆದಿದೆ.

ಇ) ಈ ಸಂಸ್ಥೆ ಕರ್ನಾಟಕ ವಿದ್ಯುತ್ ವಲಯಗಳ ಪುನರ್ ಸಂಘಟನೆ ಬಗ್ಗೆ ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸುತ್ತದೆ. ಈ ಉದ್ದೇಶಕ್ಕಾಗಿ 1.00 ಕೋಟಿ ರೂಪಾಯಿಗಳು ನಿಗದಿಗೊಳಿಸಲಾಗಿದೆ.

ನಗರದಲ್ಲಿ ಟ್ರಾಫಿಕ್ ವಾರ್ಡನ್‌ಗಳಿಗೆ ಸವಲತ್ತು

2422 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿರುವ ಸಂಚಾರಿ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು?*

ಆ) *ನಗರದ ವಾಹನ ಬಾಹುಳ್ಯಕ್ಕೆ ಈ ಸಿಬ್ಬಂದಿಯ ಸಂಖ್ಯೆ ಸಮರ್ಪಕವಾಗಿದೆಯೇ?*

ಇ) *ಸಿಬ್ಬಂದಿಯನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಈ) *ನಗರದಲ್ಲಿರುವ ಟ್ರಾಫಿಕ್ ವಾರ್ಡನ್‌ಗಳ ಸಂಖ್ಯೆ ಎಷ್ಟು?*

ಉ) *ಟ್ರಾಫಿಕ್ ವಾರ್ಡನ್‌ಗಳ ಕರ್ತವ್ಯಗಳೇನು? ಸರ್ಕಾರ ಅವರಿಗೆ ನೀಡಿರುವ ಸವಲತ್ತುಗಳೇನು?*

ಶ್ರೀ ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಸಂಚಾರಿ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ : 1543

ಆ) ಸಮರ್ಪಕವಾಗಿಲ್ಲ.

ಇ) ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 102 ಪಿಒಪಿ 94, ದಿನಾಂಕ 17-10-95 ರಲ್ಲಿ, 5 ಪೊಲೀಸ್ ಇನ್ಸ್‌ಪೆಕ್ಟರ್, 48 ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು 370 ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಸಂಚಾರ ವಿಭಾಗಕ್ಕೆ ಮಂಜೂರು ಮಾಡಲಾಗಿದೆ

ಈ) ಬೆಂಗಳೂರು ನಗರದಲ್ಲಿ ಟ್ರಾಫಿಕ್ ವಾರ್ಡನ್‌ಗಳ ಸಂಖ್ಯೆ: 235.

ಉ) ಟ್ರಾಫಿಕ್ ವಾರ್ಡನ್‌ಗಳ ಕರ್ತವ್ಯಗಳು :

1. ರಸ್ತೆ ಸುರಕ್ಷತಾ ಮುಂಜಾಗ್ರತೆಗಳ ನಿಯಮಗಳನ್ನು ಪಾಲಿಸುವಂತೆ ಮತ್ತು ಅವರ ಜವಾಬ್ದಾರಿಗಳನ್ನು ತಿಳಿದುಕೊಳ್ಳಲು ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವುದು.

2. ಪಾದಚಾರಿಗಳಿಗೆ ಮತ್ತು ವಾಹನ ಚಾಲಕರಿಗೆ ರಸ್ತೆ ಸುರಕ್ಷತಾ ಮತ್ತು ಸಂಚಾರ ತಿಳುವಳಿಕೆ ಬಗ್ಗೆ ಸಂಚಾರ ಪೊಲೀಸ್‌ರೊಂದಿಗೆ ಶಿಬಿರಗಳನ್ನು ಏರ್ಪಡಿಸುವುದು.

3. ಸಂಚಾರ ಪೊಲೀಸ್‌ರ ಕೋರಿಕೆ ಮೇರೆಗೆ ಪಾದಚಾರಿ ಮತ್ತು ವಾಹನಗಳನ್ನು ನಿಯಂತ್ರಿಸಲು ಸಹಕರಿಸುವುದು.

4. ಸಂಚಾರ ವ್ಯವಸ್ಥೆಯನ್ನು ಸುಧಾರಿಸಲು ಸಲಹೆಗಳನ್ನು ಕಂಡು ಹಿಡಿದು ಉಪ ಪೊಲೀಸ್ ಆಯುಕ್ತರು ಸಂಚಾರರವರಿಗೆ ಕಳುಹಿಸುವುದು.

5. ಸಂಚಾರ ನಿಯಮಗಳ ಉಲ್ಲಂಘನೆಯನ್ನು ಕಂಡ ಕೂಡಲೇ ಸಂಚಾರ ಪೊಲೀಸ್‌ರಿಗೆ ವರದಿ ಮಾಡುವುದು.

6. ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ಅಥವಾ ಹೆಚ್ಚಿಗೆ ಹಣ ಕೇಳುವ ಟ್ಯಾಕ್ಸಿ ಮತ್ತು ಆಟೋರಿಕ್ಷಾ ಡ್ರೈವರುಗಳ ಮೇಲೆ ವರದಿ ನೀಡುವುದು.

7. ಸಾರ್ವಜನಿಕರಲ್ಲಿ ಸಂಚಾರ ನಿಯಮಗಳ ಬಗ್ಗೆ ತಿಳುವಳಿಕೆ ಮೂಡಿಸಲು ಸಂಚಾರ ಪೊಲೀಸ್‌ರೊಂದಿಗೆ ವಿಶೇಷ ತಪಾಸಣೆ ಮಾಡುವುದು ಹಾಗೂ ಶಿಬಿರಗಳನ್ನು ಏರ್ಪಡಿಸುವುದು.

8. ಸಂಚಾರ ನಿಯಮಗಳ ಬಗ್ಗೆ ಪ್ರಚಾರ ಮಾಡಲು ಬಿತ್ತಿಪತ್ರ ಮತ್ತು ಕರಪತ್ರ ಹಾಗೂ ಪುಸ್ತಕ ತಯಾರಿಸಿ ಹಂಚುವುದು.

9. ಸಂಚಾರ ಪೊಲೀಸ್‌ರೊಂದಿಗೆ ಶಾಲಾ ಮಕ್ಕಳಿಗೆ ಸಂಚಾರ ನಿಯಮಗಳ ಬಗ್ಗೆ ಶಿಬಿರಗಳನ್ನು ಏರ್ಪಡಿಸುವುದು.

ಟ್ರಾಫಿಕ್ ವಾರ್ಡನ್‌ರವರಿಗೆ ನೀಡಿರುವ ಸವಲತ್ತುಗಳು :

ಸ್ವಯಂಸೇವಾ ಸಂಸ್ಥೆಯಾದ ಟ್ರಾಫಿಕ್ ವಾರ್ಡನ್‌ಗಳಿಗೆ ಸರ್ಕಾರದಿಂದ ಯಾವುದೇ ಸಂಬಳ ಅಥವಾ ಸಹಾಯಧನ ಲಭ್ಯವಿಲ್ಲ. ಅವರಿಗೆ ಅಗತ್ಯವಿರುವ ಸಮವಸ್ತ್ರಗಳನ್ನು ಅವರೇ ಹೊಲಿಸಿಕೊಳ್ಳುತ್ತಾರೆ. ಟ್ರಾಫಿಕ್ ಕಂಪ್ಲೇಂಟ್ ಕಾರ್ಡುಗಳನ್ನು ಮುದ್ರಿಸಲು ಸರ್ಕಾರ ಇವರಿಗೆ ರೂ. 30,000ಗಳನ್ನು ಕಮೀಷನರ್, ಬೆಂಗಳೂರುರವರ ಮುಖಾಂತರ ನೀಡುತ್ತದೆ.